## IN THE COURT OF THE SENIOR CIVIL JUDGE AND JMFC, TIPTUR.

## OS No. 27/2022

**PW-1**

## Oath is Administered to the Witness on 26.06.2025.

## Cross Examination by: Sri. T.K.R. Counsel for Defendant

ನನ್ನ ಗಂಡನ ಹೆಸರು ನಟರಾಜು ಜಿ ಸಿ ಎಂದರೆ ನಿಜ. ನನ್ನ ಗಂಡ ದಿಃ19.10.2019 ರಂದು ಮರಣಹೊಂದಿರುತ್ತಾರೆ ಎಂದರೆ ನಿಜ. ನನ್ನ ಅತ್ತೆಯ ಹೆಸರು ಜಯಮ್ಮ ಎಂದರೆ ನಿಜ. ಅವರೂ ಸಹ ದಿಃ 09-05-2021 ರಂದು ಮರಣ ಹೊಂದಿರುತ್ತಾರೆ ಎಂದರೆ ನಿಜ. ಪ್ರತಿವಾದಿಯು ನನ್ನ ಗಂಡನ ಅಣ್ಣನಾಗಿದ್ದಾನೆ. ಪ್ರತಿವಾದಿಗೆ 2 ಜನ ಹೆಣ್ಣು ಮಕ್ಕಳು ಎಂದರೆ ನಿಜ. ಅವರೆಂದರೆ ತನುಜ ಮತ್ತು ಸುಷ್ಮಾ. ಅವರಿಬ್ಬರೂ ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಇದ್ದಾರೆ ಎಂದರೆ ನಿಜ. ದಾವಾ ಐಟಂ ನಂಬರು 4 ರಲ್ಲಿ ನನ್ನ ಮತ್ತು ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ ಖಾತೆ ಮತ್ತು ಪಹಣಿ ಇದೆ ಎಂದರೆ ನಿಜ. ದಿಃ13.09.2021 ರಂದು ಎಂ ಆರ್ ಹೆಚ್ 08/2021-22 ರ ರೀತ್ಯಾ ಫವತಿ ಆಧಾರದ ಮೇಲೆ ನನ್ನ ಮತ್ತು ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ನಿಜ. ಅದಕ್ಕೂ ಮೊದಲು ಆ ಆಸ್ತಿಯು ನನ್ನ ಅತ್ತೆ ಜಯಮ್ಮ ರವರ ಹೆಸರಿಗೆ ಇತ್ತು ಎಂದರೆ ನಿಜ.

ದಾವಾ ಐಟಂ ನಂಬರು 3 ರ ಖಾತೆ ಮತ್ತು ಪಹಣಿ ಪ್ರತಿವಾದಿ ಹೆಸರಿಗೆ ಇದೆ ಎಂದರೆ ನಿಜ. ಆ ಸ್ವತ್ತಿನಲ್ಲಿ ಪ್ರತಿವಾದಿಯೇ ಅನುಭವದಲ್ಲಿ ಇದ್ದಾರೆ ಎಂದರೆ ನಿಜ. ಸಾಕ್ಷಿಯು ನಮಗೆ ತಿಳಿಸದೇ ಅವರು, ಅವರ ಹೆಸರಿಗೆ ಸ್ವತ್ತು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ದಾವಾ ಐಟಂ ನಂಬರು 3 ರ ಸ್ವತ್ತು ಪ್ರತಿವಾದಿಯ ತಾಯಿ ಜಯಮ್ಮ ದಾನಪತ್ರವನ್ನು ದಿಃ14.07.2016 ರಂದು ಬರೆದುಕೊಟ್ಟಿದ್ದಾರೆ ಎಂದರೆ ನಿಜ. 2016 ರಿಂದ ಪ್ರತಿವಾದಿಯು ಆ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾನೆ ಎಂದರೆ ನಿಜ. ನಾವೂ ಸಹ ಆ ಸ್ವತ್ತಿನಲ್ಲಿ ಹೋಗಿ - ಬರುವುದು ಮಾಡುತ್ತೇವೆ.

ದಾನಪತ್ರ ಆಗುವ ಸಮಯದಲ್ಲಿ ನನ್ನ ಗಂಡ ಬದುಕಿದ್ದರು ಎಂದರೆ ನಿಜ. ನನ್ನ ಗಂಡ ಮರಣ ಹೊಂದಿದ ಬಳಿಕ ನನ್ನ ಮಗಳ ಮದುವೆ ಆಗಿರುತ್ತದೆ ಎಂದರೆ ನಿಜ. ದಾವಾ ಐಟಂ ನಂಬರು 4ರಲ್ಲಿ ನಾನು ಮತ್ತು ಪ್ರತಿವಾದಿ ಈಗಲೂ ಸಹ ಜಂಟಿಯಾಗಿ ಅನುಭವದಲ್ಲಿ ಇದ್ದೇವೆ ಎಂದರೆ ನಿಜ.

ದಾವಾ ಐಟಂ ನಂಬರು 2ರಲ್ಲಿ ಪ್ರತಿವಾದಿ ಆತನ ಕುಟುಂಬದೊಂದಿಗೆ ಈಗಲೂ ಸಹ ವಾಸ ಇದ್ದಾನೆ ಎಂದರೆ ನಿಜ. ದಾವಾ ಐಟಂ ನಂಬರು 2 ರಲ್ಲಿ ನನ್ನ ಗಂಡ ಬದುಕಿರುವ ಸಮಯದಲ್ಲಿ ಮತ್ತು ಈಗಲೂ ಸಹ ಪ್ರತಿವಾದಿಯೇ ಅದರಲ್ಲಿ ಸ್ವಾಧೀನ ಹೊಂದಿದ್ದಾನೆ ಎಂದರೆ ನಿಜ. ಅದಕ್ಕೆ ಪ್ರತಿವಾದಿಯೇ ನಗರಸಭೆಯಲ್ಲಿ ಪ್ರತಿವರ್ಷ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನಿಜ. ಸಾಕ್ಷಿಯು ನಮಗೆ ಭಾಗ ಮಾಡಿಕೊಟ್ಟಿಲ್ಲ ಅದ್ದರಿಂದ ನಾವು ಭಾಗ ಕೇಳುತ್ತಿದ್ದೇವೆ ಎಂದು ಹೇಳುತ್ತಾರೆ.

ದಾವಾ ಐಟಂ ನಂಬರು 1ರಲ್ಲಿ ಪೂ ಪ - 55 ಅಡಿ ಮತ್ತು ಉ ದ - 35 ಅಡಿಗಳ ವಿಸ್ತೀರ್ಣದಲ್ಲಿ ಪೂ ಪ - 23 ಅಡಿ ಮತ್ತು ಉ ದ - 15 ವಾಸದ ಮನೆ ಇತ್ತು ಎಂದರೆ ನಿಜ. ಆ ವಾಸದ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ವಾಸವಾಗಿದ್ದೆವು ಎಂದರೆ ನಿಜ. ನನ್ನ ಮಗಳ ಆಗುವವರೆಗೂ ಅ ಮನೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿಯಲ್ಲ. ನಾವು 2017ರ ವರೆವಿಗೂ ಅಲ್ಲಿ ಇದ್ದೆವು. ಮನೆ ಬಿಟ್ಟು ಖಾಲಿ ನಿವೇಶನ ಹಾಗೇ ಇದೆ ಎಂದರೆ ನಿಜ. ದಾವಾ ಐಟಂ ನಂಬರು 1ರ ಸ್ವತ್ತಿಗೆ ಪ್ರತಿವಾದಿಯೇ ಕಂದಾಯ ಕಟ್ಟಿಕೊಂಡು ಹೋಗುತ್ತಿದ್ದಾನೆ ಎಂದರೆ ನಿಜ.

ನನ್ನ ಮಾವನ ಹೆಸರು ಚಿಕ್ಕಬಸವಯ್ಯ ಎಂದರೆ ನಿಜ. ಅವರು ದಿಃ25.07.2007 ರಂದು ಮರಣ ಹೊಂದಿರುತ್ತಾರೆ ಎಂದರೆ ನಿಜ. ಆತ ಮರಣ ಹೊಂದಿದ ನಂತರದಿಂದ ದಾವಾ ಐಟಂ ನಂಬರು 1 ಮತ್ತು 2ರ ಸ್ವತ್ತಿಗೆ ಪ್ರತಿವಾದಿಯೇ ಕಂದಾಯ ಕಟ್ಟಿಕೊಂಡು ಬರುತ್ತಿದ್ದಾನೆ ಎಂದರೆ ನಿಜ. ನಿಪಿ-6 ಮತ್ತು 7 ದಾಖಲೆಗಳು 2011 ರಿಂದ 2014ಕ್ಕೆ ಸಂಬಂಧಿಸಿದ್ದಾಗಿದ್ದು, ದಾವಾ ಐಟಂ ನಂಬರು 1 ಮತ್ತು 2ರ ಸ್ವತ್ತು ನನ್ನ ಮಾವನ ಹೆಸರಿನಲ್ಲಿಯೇ ಆ ದಾಖಲೆಗಳು ಇವೆ ಎಂದರೆ ನಿಜ. ನಿಪಿ-6 ಮತ್ತು 7ನ್ನು ನಾನು ನಗರಸಭೆಯಿಂದ ದಾಖಲೆಗಳನ್ನು ತಂದಿದ್ದೇನೆ.

ಆ ದಾಖಲೆಗಳನ್ನು ನಾನೇ ಅರ್ಜಿ ಕೊಟ್ಟು ತಂದಿದ್ದೇನೆ. ನಾನು ಆ ದಾಖಲೆಗಳನ್ನು ಪಡೆಯಲು ನಗರಸಭೆಗೆ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-6 ಮತ್ತು 7ರ ದಾಖಲೆಗಳನ್ನು ಪ್ರತಿವಾದಿ ಕಂದಾಯ ಕಟ್ಟಿ ತಂದು ಮನೆಯಲ್ಲಿ ಇಟ್ಟಿದ್ದನ್ನು ನಾನು ಖದ್ದು ತಂದಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಐಟಂ ನಂಬರು 1 ಮತ್ತು 2ರ ಸ್ವತ್ತಿನ ದಾಖಲಾತಿಗಳು ನಗರ ಸಭೆಯಲ್ಲಿ ನನ್ನ ಮಾವನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ನಿಜ. ನನ್ನ ಮಾವ ಮರಣ ಹೊಂದಿದ ಬಳಿಕ ದಾವಾ ಐಟಂ ನಂಬರು 1 ಮತ್ತು 2 ನನ್ನ ಗಂಡ ಮತ್ತು ಪ್ರತಿವಾದಿ ಮತ್ತು ನನ್ನ ಅತ್ತೆ ಜಯಮ್ಮನ ಹೆಸರಿಗೆ ಜಂಟಿಯಾಗಿ ದಾಖಲೆ ಬಂದಿತ್ತು ಎಂದರೆ ನಿಜ. ಅದರ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ಮೊಹಮ್ಮದ್ ಆರೀಫುಲ್ಲಾ ಸಿ.ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.